ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 19/06/2019

# ರಾಜ್ಯಪಾಲರ ಮೌನವೇಕೆ?

## ಕರ್ನಾಟಕ ರಾಜ್ಯ ಮುಕ್ತ ವಿವಿ ಅಮಾನ್ಯತೆ | ಯುಜಿಸಿ ನಿಯಮ ಉಲ್ಲಂಘಿಸಿದ ವಿವಿಯ ಕಿವಿ ಹಿಂಡಿದ್ದರೆ ಈ ಸ್ಥಿತಿಯೇ ಬರುತ್ತಿರಲಿಲ್ಲ

■ **ಕೂಡ್ಲಿಗುರುರಾಜ** ಮೈಸೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅನೇಕ ವರ್ಷಗಳಿಂದ ಸಮಸ್ಯೆ ಎದುರಿಸುತ್ತಿದ್ದರೂ ರಾಜಭವನದಿಂದ ನಿರೀಕ್ಷಿತ ಸ್ಪಂದನ ಸಿಗದೇ ಇರುವುದು ವಿದ್ಯಾರ್ಥಿಗಳಿಗೆ ತೀವ್ರ ಬೇಸರ ಮೂಡಿಸಿದೆ.

ರಾಜ್ಯದ ಇತರ ವಿಶ್ವವಿದ್ಯಾಲಯಗಳಂತೆಯೇ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿವಿಗೂ ರಾಜ್ಯಪಾಲರೇ ಕುಲಾಧಿಪತಿಗಳು. ಹಾಗೆ ನೋಡಿದರೆ, ಇತರ ವಿವಿಗಳಿಗಿಂತ ಸ್ವಲ್ಪ ಭಿನ್ನವಾದ ಕಾಯ್ದೆಯನ್ನು ಮುಕ್ತ ವಿವಿ ಹೊಂದಿದೆ. ಈ ಕಾಯ್ದೆ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿವಿ ವಿಚಾರದಲ್ಲಿ ರಾಜ್ಯ ಸರಕಾರಕ್ಕಿಂತ ರಾಜ್ಯಪಾಲರಿಗೇ ಹೆಚ್ಚಿನ ಅಧಿಕಾರವಿದೆ. ಹೀಗಿರುವಾಗ ರಾಜ್ಯಪಾಲರು ಮುಕ್ತ ವಿವಿಯ ಸಮಸ್ಯೆಗಳತ್ತ ತಿರುಗಿ ನೋಡದೇ ಇರುವುದು ಸಂತ್ರಸ್ತ ವಿದ್ಯಾರ್ಥಿಗಳಿಗೆ ನೋವು ತಂದಿದೆ.

ಹಾಲಿ ರಾಜ್ಯಪಾಲರಾದ ವಜುಭಾಯಿ ವಾಲಾ 2014ರ ಸೆಪ್ಟೆಂಬರ್‌ನಿಂದ ರಾಜ್ಯದ ರಾಜ್ಯಪಾಲರಾಗಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿವಿಗೆ 2013-14, 14-15ನೇ ಸಾಲಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಿದಾಗ ವಾಲಾ ಅವರೇ ಈ ವಿವಿಯ ಕುಲಾಧಿಪತಿಗಳಾಗಿದ್ದರು. ಈ ಎರಡು ವರ್ಷಗಳ ಕಾಲ ಪ್ರವೇಶ ನಡೆದು ಕೆಲವು ಕೋರ್ಸ್‌ಗಳ ಪರೀಕ್ಷೆಯೂ ಮುಗಿದ ಬಳಿಕ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಈ ಎರಡು ವರ್ಷಗಳ ಅವಧಿಗೆ ವಿಶ್ವವಿದ್ಯಾಲಯಕ್ಕೆ ಮಾನ್ಯತೆಯೇ ಇರಲಿಲ್ಲ ಎಂದು 2015ರಲ್ಲಿ ಆದೇಶ ಹೊರಡಿಸಿತು.ಇದಕ್ಕೂ ಮುನ್ನ ಯುಜಿಸಿಯು ನಿಯಮ ಉಲ್ಲಂಘನೆ ಸಂಬಂಧ ವಿವಿಗೆ ಸತತ ಎಚ್ಚರಿಕೆ ನೀಡಿತ್ತು. ಈ ಹಂತದಲ್ಲಿ ರಾಜ್ಯಪಾಲರು ಮಧ್ಯಪ್ರವೇಶಿಸಿ, ಯುಜಿಸಿ ನಿಯಮಗಳನ್ನು ಪಾಲಿಸುವಂತೆ ಅಂದಿನ ಕುಲಪತಿಗಳಿಗೆ ನಿರ್ದೇಶನ



ಕೊಡಬಹುದಿತ್ತು. ಅಂದೇ ವಿವಿ ಎಡವಟ್ಟಿಗೆ ಬ್ರೇಕ್ ಹಾಕಬಹುದಿತ್ತು.

ಮುಕ್ತ ವಿವಿಯ ಸಂತ್ರಸ್ತ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ರಾಜ್ಯಪಾಲರು ಸ್ಪಂದಿಸಿದ್ದು ಬಹಳ ಕಡಿಮೆ. ಪ್ರಧಾನಿ ನರೇಂದ್ರ ಮೋದಿಯವರು ಗುಜರಾತ್

**ಮುಕ್ತ ವಿವಿ**

**ವಿಕ ಅಭಿಯಾನ**

ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಅವರ ಸಂಪುಟದಲ್ಲಿ ಸಚಿವರಾಗಿದ್ದ ರಾಜ್ಯಪಾಲರು ವಿವಿಯ ಕುಲಾಧಿಪತಿಗಳಾಗಿ ಕೇಂದ್ರ ಸರಕಾರ ಹಾಗೂ ಯುಜಿಸಿ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡಲು ಪ್ರಯತ್ನ ನಡೆಸಿ ಒತ್ತಡ ತರಬಹುದಿತ್ತು. ರಾಜ್ಯಪಾಲರ ಬಳಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಭೇಟಿಗಾಗಿ ಸಮಯ ನೀಡುವಂತೆ ಕೇಳಲು ತೆರಳಿದ ವಿದ್ಯಾರ್ಥಿಗಳ ನಿಯೋಗಕ್ಕೂ ರಾಜಭವನದ ಗೇಟಿನ ಒಳಗೆ ಪ್ರವೇಶ ಸಿಗಲಿಲ್ಲ.

ರಾಜ್ಯಪಾಲರು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಿಗೆ ಮುಕ್ತ ವಿವಿಯ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವಂತೆ ಪತ್ರ ಬರೆದಿರಬಹುದು. ಯುಜಿಸಿ ಅಧಿಕಾರಿಗಳ ಜೊತೆ ಮಾತಾಡಿರಬಹುದು.

> ಮುಕ್ತ ವಿವಿ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲರು ವಿದ್ಯಾರ್ಥಿಗಳ ಹಿತ ರಕ್ಷಿಸಲು ಮುಂದಾಗಬೇಕಿದೆ. 2013-14, 14-15ನೇ ಸಾಲಿನಲ್ಲಿ ನಾವು ವಿವಿಗೆ ಪ್ರವೇಶ ಪಡೆದಾಗ ಆಗಲೂ ಕುಲಾಧಿಪತಿಗಳಾಗಿದ್ದವರು ರಾಜ್ಯಪಾಲ ವಜೂಭಾಯ್ ವಾಲಾ ಅವರೇ. ಆಗ ಏಕೆ ಇವರು ಯುಜಿಸಿ ಮಾನ್ಯತೆ ಇಲ್ಲದೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದೆಂದು ಅಂದಿನ ಕುಲಪತಿಗಳಿಗೆ ಸೂಚನೆ ನೀಡಲಿಲ್ಲ? ರಾಜ್ಯಪಾಲರ ಗಮನಕ್ಕೆ ಬರದೇ 2013-14, 14-15ನೇ ಸಾಲಿನಲ್ಲಿ ಮುಕ್ತ ವಿವಿಯಲ್ಲಿ ವಿದ್ಯಾರ್ಥಿಗಳ ಪ್ರವೇಶ ನಡೆಯಿತೇ?
>
> **-ಹನುಮಂತ** ಸಂತ್ರಸ್ತ ವಿದ್ಯಾರ್ಥಿ ಕುಕ್ಕನಪಾಳ್ಯ, ಕೊಪ್ಪಳ ಜಿಲ್ಲೆ

> ಕರ್ನಾಟಕ ರಾಜ್ಯ ಮುಕ್ತ ವಿವಿಯ 2013-14, 14-15ನೇ ಸಾಲಿನ ವಿದ್ಯಾರ್ಥಿಗಳ ಸಮಸ್ಯೆ ಕುರಿತು ವಿವಿಯ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲ ವಜೂಭಾಯ್ ವಾಲಾ ಅವರಿಗೆ ಈ ಹಿಂದೆ ಪತ್ರ ಬರೆದಿದ್ದೆ. ಆದರೆ, ಇದಕ್ಕೆ ಯಾವುದೇ ಸ್ಪಂದನೆ ಸಿಗಲಿಲ್ಲ. ಪತ್ರಕ್ಕೆ ಉತ್ತರವೇ ಬರಲಿಲ್ಲ. ಇನ್ನಾದರೂ ರಾಜ್ಯಪಾಲರು ವಿದ್ಯಾರ್ಥಿಗಳ ಹಿತ ಕಾಪಾಡಬೇಕು.
>
> **-ಕೆ.ಎಸ್.ಶಿವರಾಮು,** ಕರ್ನಾಟಕ ರಾಜ್ಯ ಮುಕ್ತ ವಿವಿ ಉಳಿಸಿ ಹೋರಾಟ ಸಮಿತಿ ಸಂಚಾಲಕರು.

ಆದರೆ, ಈ ನಿಟ್ಟಿನಲ್ಲಿ ಅವರ ಪ್ರಯತ್ನ ನಿರಂತರವಾಗಿ ನಡೆದಿರುವುದು ಕಂಡು ಬರುವುದಿಲ್ಲ. ಮುಕ್ತ ವಿವಿ ಹೋರಾಟ ಸಮಿತಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡುವಂತೆ ಕೋರಿ ಪತ್ರ ಬರೆದರೂ ಇದಕ್ಕೆ ಉತ್ತರಿಸುವ ಗೋಜಿಗೆ ರಾಜ್ಯಪಾಲರು ಹೋಗಿಲ್ಲ.